OS No: 137/2019
PW : 01

**ಸಾಕ್ಷಿಯನ್ನು ದಿಃ 07.07.2023 ರಂದು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಎಸ್.ಎಸ್.ಬಿ. ವಕೀಲರಿಂದ.**

ನಾನು ದಾವಾ ಆಸ್ತಿ ಖರೀದಿ ಮಾಡುವ ಕಾಲಕ್ಕೆ ಅದರ ಕ್ಷೇತ್ರ 5 ಎಕರೆ ಇತ್ತು. ಸದರಿ ಜಮೀನು 5 ಎಕರೆ ಇದ್ದ ಬಗ್ಗೆ ದಾಖಲೆ ಹಾಜರಪಡಿಸಿರಬಹುದು. ದಾವಾ ಜಮೀನು 1 ನೇ ಪ್ರತಿವಾದಿಯ ಗಂಡ ಮಹಾದೇವನಿಗೆ ಹೇಗೆ ಬಂತು ಅಂತ ಗೊತ್ತಿಲ್ಲ. ಸದರಿ ದಾವಾ ಜಮೀನು ಖರೀದಿ ಕರಾರು ಮಾಡುವ ಕಾಲಕ್ಕೆ ಮಹಾದೇವನ ಮನೆತನದವರನ್ನು ವಿಚಾರಿಸಿರುವುದಿಲ್ಲ.

ನಾನು ಖರೀದಿ ಮಾಡುವ ಕಾಲಕ್ಕೆ ದಾವ ಜಮೀನು ಮಹಾದೇವನ ಹೆಸರಿನಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ. ನಾನು ಮತ್ತು ಮಹಾದೇವ ಸೇರಿ ಮಿಲಾಪಿ ಆಗಿ ಖರೀದಿ ಕರಾರು ಪತ್ರ ಸೃಷ್ಠಿ ಮಾಡಿದ್ದೇವೆ ಎಂದರೆ ಸರಿಯಲ್ಲ. ನಾನು ಮಹಾದೇವನನ್ನು 2014 ರಲ್ಲಿ ಖರೀದಿ ಹಾಕಿಕೊಡುವಂತೆ ಕೇಳಿರುತ್ತೇನೆ ಅಂತ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ, ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಮಹಾದೇವನನ್ನು ಖರೀದಿ ಹಾಕಿಕೊಡುವಂತೆ ಕೇಳಿದಾಗ ಆತನು 11E ನಕ್ಷೆ ಆಗಿರುವುದಿಲ್ಲ ಅಂತ ತಿಳಿಸಿರುತ್ತಾನೆ. 11E ನಕ್ಷೆ ಆದ ಬಗ್ಗೆ ವಿಚಾರಿಸಿರುವುದಿಲ್ಲ. ಪ್ರತಿವಾದಿಗಳ ಹೆಸರಿನಲ್ಲಿ ಉತಾರ ಬಂದ ಬಗ್ಗೆ ನಾನು ವಿಚಾರಿಸಿರುವುದಿಲ್ಲ. ಸಾಕ್ಷಿ ಮುಂದೂವರೆದು ವಾರಸಾ ಮೂಲಕ ಬಂದಿರುತ್ತದೆ ಅಂತ ಸಾಕ್ಷಿ ನುಡಿಯುತ್ತಾರೆ.

ಮರು ವಿಚಾರಣೆ ಇಲ್ಲ.

(ತೆರದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ. ಕೇ. ಸರಿ ಇದೆ.

ಸಹಿ/-
ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.
ಇಂಡಿ.